

## ನಿಗೂಢ ಕಮಂಡಲ ತೀರ್ಥ!

ಶೃಂಗೇರಿ ಸನಿಹದ ಕೊಪ್ಪ ತಾಲ್ಲೂಕಿನ ಕಸವೆ ಗ್ರಾಮದಲ್ಲಿರುವ 'ಕಮಂಡಲ ಗಣಪತಿ ದೇವಾಲಯ' ಪಿಕ್ನಿಕ್ ಪ್ರಿಯರಿಗೆ ಹೇಳಿ ಮಾಡಿಸಿದ, ಕಾನನದ ನಡುವಿನ ಪ್ರಶಾಂತ ವಾತಾವರಣ ಹೊಂದಿರುವ ಪ್ರಕೃತಿ ಸೌಂದರ್ಯದ ತಾಣ ಇದಾಗಿದೆ. ಇಲ್ಲಿ ಅಸ್ತಿತ್ವದಲ್ಲಿರುವ ಪುರಾತನ ಮಂದಿರಕ್ಕೆ ಸುಮಾರು ಒಂದು ಸಾವಿರಕ್ಕೂ ಅಧಿಕ ವರ್ಷಗಳ ಇತಿಹಾಸವಿದೆ. ಮಂದಿರದಲ್ಲಿನ ಗಣಪತಿ ವಿಗ್ರಹದೆದುರಲ್ಲೇ ವರ್ಷಪೂರ್ತಿ ನಿರಂತರ ಉದಿಸುವ ನಿಗೂಢ 'ಕಮಂಡಲ ತೀರ್ಥ' ಎನ್ನುವ ನೀರಿನ ಚಿಲುಮೆಯು ಪ್ರಮುಖ ಆಕರ್ಷಣೆಯಾಗಿದೆ. ಬ್ರಹ್ಮ ದೇವರ ಕಮಂಡಲದಿಂದ ಹರಿದು ಬರುತ್ತಿದೆಯೆಂಬ ಪೌರಾಣಿಕ ಐತಿಹ್ಯವಿರುವ ಸದ್ರಿ ಕುಂಡ ಬ್ರಾಹ್ಮಿ ನದಿಯ ಉಗಮಸ್ಥಾನವಾಗಿಯೂ ಪ್ರಸಿದ್ಧಿ ಹೊಂದಿದೆ. ಮಾತ್ರವಲ್ಲದೆ ಈ ಪವಾಡ ಸದೃಶ ಕಮಂಡಲ ತೀರ್ಥದಲ್ಲಿ ಸ್ನಾನ ಮಾಡುವುದರಿಂದ ಶನಿದೋಷ ನಿವಾರಣೆಯಾಗಿತ್ತದೆಯೆಂಬ ಪ್ರತೀತಿಯೂ ಇದೆ.

—ರಮಣ್ ಶೆಟ್ಟಿ ರೆಂಜಾಳ್, ಮುಂಬಯಿ

## ಸಂಜೀವಿನಿ ಹನುಮ

ಈ ಚಿತ್ರದಲ್ಲಿ ಕಾಣುತ್ತಿರುವುದು ಆಂಜನೇಯ ದೇವರ ಶಿಲ್ಪಾಕೃತಿ. ಆಂಜನೇಯ ಸಂಜೀವಿನಿ ಪರ್ವತ ಹೊತ್ತು ಹಾರುತ್ತಿರುವಂತೆ ಶಿಲ್ಪಾಕೃತಿಯಲ್ಲಿ ಕಾಣುತ್ತದೆ. ಇದೇ ರೀತಿಯ ಮೂರ್ತಿಗಳು ಹಾಗೂ ಫೋಟೊಗಳನ್ನು ಸಾಮಾನ್ಯವಾಗಿ ಬಹುತೇಕರು ದೇಗುಲಗಳಲ್ಲಿ ಅಥವಾ ಮನೆಗಳಲ್ಲಿ ಕಂಡಿರುತ್ತಾರೆ. ಆದರೆ ವಾಸ್ತವವಾಗಿ ಹರಿಹರದ ಹರಿಹರೇಶ್ವರ ದೇವಾಲಯದಲ್ಲಿ 'ಸಂಜೀವಿನಿ ಪರ್ವತವನ್ನು ಹೊತ್ತು ಓಡುತ್ತಿರುವ' (ಇಲ್ಲಿನ ನಂಬಿಕೆ ಆದರೆ ಚಿತ್ರದಲ್ಲಿ ಅದು ಗೋಚರವಾಗುವುದಿಲ್ಲ) ಅಪರೂಪದ ಹನುಮನ ಶಿಲ್ಪವಿದು ಎಂದು ನಂಬಲಾಗಿದೆ. ಈ ದೇಗುಲವು 12ನೇ ಶತಮಾನದಲ್ಲಿ ನಿರ್ಮಾಣಗೊಂಡಿದ್ದು, ಇದರ ಹೆಬ್ಬಾಗಿಲ ಬಳಿ ಇರುವ ಬಲಭಾಗದ ಕೊಠಡಿಯಲ್ಲಿ ಈ ಶಿಲ್ಪವಿದೆ. ಶಿಲ್ಪಾಕೃತಿಯಲ್ಲಿ ಹನುಮನ ಬಾಲ ಎಡಗಾಲ ಮಂಡಿವರೆಗೂ ವೃತ್ತಾಕಾರದಲ್ಲಿ ಸುತ್ತಿಕೊಂಡಿರುವುದು ವಿಶೇಷ. ಬಾಲದ ತುದಿ ಸ್ವಲ್ಪ ಮುಕ್ಕಾಗಿದೆ.

—ಸೀತಾ ಎಸ್. ನಾರಾಯಣ, ಹರಿಹರ



